सरयू
# ಸರಯೂ
ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly   Regn. No. KARKAN/2014/62363
**March Vol. : 12   Issue : 10   5127/ ವಿಶ್ವಾವಸು ಸಂವತ್ಸರ ಮಾರ್ಚ್ 2026 ಪುಟ 4 Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಪಾದಪೂಜೆ ಮತ್ತು ಶಾಲಾ ವಾರ್ಷಿಕೋತ್ಸವ 23.01.2026




* ಶ್ರೀರಾಮ ಇಂಗ್ಲಿಷ್ ಮೀಡಿಯಂ ಪೂರ್ವ ಪ್ರಾಥಮಿಕ ಮತ್ತು 1–4 ನೇ ತರಗತಿಯ ಶಾಲಾ ವಾರ್ಷಿಕೋತ್ಸವ
* ಗುರೂಜಿ ಜನ್ಮದಿನದ ಪ್ರಯುಕ್ತ ಮಾತೃಭೋಜನ – ಪಾದಪೂಜೆ – ಕೈತುತ್ತು
* ಶ್ರೀಮತಿ ಸುಧಾ ಕಶೆಕೋಡಿ ಇವರಿಂದ ಪಾದಪೂಜೆಯ ವಿಧಿ ವಿಧಾನಗಳು
* ವಿದ್ಯಾರ್ಥಿಗಳು ತಮ್ಮ ಹೆತ್ತವರ ಪಾದವನ್ನು ಗುರುತಿಸಿ ಪಾದಪೂಜೆ
* ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಪೋಷಕರು ಮತ್ತು ಮಕ್ಕಳಿಗೆ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಕುರಿತಾಗಿ   ಕಿವಿಮಾತು

ಶ್ರೀಮತಿ ಕಮಲ ಪ್ರಭಾಕರ್ ಭಟ್, ಶ್ರೀರಾಮ ವಿದ್ಯಾಕೇಂದ್ರ ಸಿಇಓ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಪ್ರಾಂಶುಪಾಲರಾದ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಉಪಸ್ಥಿತಿ.



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಪಾದಪೂಜೆ







### ಶಿಶುಮಂದಿರ ಹಾಗೂ 1ನೇ ಮತ್ತು 2ನೇ ತರಗತಿ ವಾರ್ಷಿಕೋತ್ಸವ : 13.02.2026

ವಾರ್ಷಿಕೋತ್ಸವದಲ್ಲಿ ಸಂಘ ಶತಾಬ್ಧಿಯ ಪ್ರಯುಕ್ತ ರಾ.ಸ್ವಂ.ಸೇವಕ ಸಂಘವು ಬೆಳೆದು ಬಂದ ರೀತಿಯನ್ನು ರೂಪಕ, ಸಾಂಶ್ಕೃತಿಕ ಕಾರ್ಯಕ್ರಮ, ಸಾಮೂಹಿಕ ಸಹಭೋಜನ, ಡಾ. ಸುಮನ ಶೆಟ್ಟಿ ಸಹಪ್ರಾಧ್ಯಾಪಕರು ಪ್ರಥಮ ದರ್ಜೆ ಕಾಲೇಜು ಸಿದ್ದಕಟ್ಟೆ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಾಮರಸ್ಯ ಸಹಭೋಜನದ ಬಗ್ಗೆ ಶ್ರೀಮತಿ ರಾಜೇಶ್ವರಿ ಮಾತಾಜಿ ಮಾತನಾಡಿದರು.

### ಕುಟುಂಬ ಮಿಲನ – ವಿವೇಕ ಸಂಗಮ 15.02.2026






ಶ್ರೀರಾಮ ಪದವಿಪೂರ್ವ ವಿದ್ಯಾಲಯ ವಿಂಶತಿ ಸಂಭ್ರಮದ ಶ್ರೀರಾಮ ವಿದ್ಯಾಕೇಂದ್ರ ನಿಮಿತ್ತ ಕುಟುಂಬ ಮಿಲನ – ವಿವೇಕ ಸಂಗಮ ಕಾರ್ಯಕ್ರಮ ರಾಮಕೃಷ್ಣ ಮಠ, ಮಂಗಳಾದೇವಿ ಮಂಗಳೂರು ಇಲ್ಲಿ ನಡೆಯಿತು

ಸ್ವಾಮಿ ಜಿತಕಾಮಾನಂದಜಿ ಅಧ್ಯಕ್ಷರು, ಶ್ರೀ ರಾಮಕೃಷ್ಣ ಮಠ, ಮಂಗಳೂರು ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಶ್ರೀ ಗಣೇಶ್ ಕುದ್ರೋಳಿ ಅಂತರಾಷ್ಟ್ರೀಯ ಖ್ಯಾತಿಯ ಜಾದುಗಾರರು ಶಿಕ್ಷಣದಲ್ಲಿ ಜಾದು ಎನ್ನುವ ವಿಷಯದಲ್ಲಿ ಅವಧಿಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಡಾಪ್ರಭಾಕರ್ ಭಟ್ ಕಲ್ಲಡ್ಕ  ಅಧ್ಯಕ್ಷರು, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇವರು ಮಾತನಾಡಿ ವ್ಯಕ್ತಿ ತನ್ನ ನಡೆ ನುಡಿ ಕಾರ್ಯವೈಖರಿಗಳಿಂದ ತನ್ನ ದೇಶಕ್ಕೆ ಸೇವೆ ಸಲ್ಲಿಸಿ ಮಾತೃಭೂಮಿಯ ಹೆಸರನ್ನು ಉಳಿಸಿ ಬೆಳೆಸಲು ಕುಟುಂಬ ಸಹಕಾರಿ ಎಂದು ಮಾರ್ಗದರ್ಶನದ ಮಾತುಗಳನ್ನಾಡಿದರು. ಮಕ್ಕಳ ವೇದಿಕೆಯಲ್ಲಿ  ಶ್ರೀ ಕುದ್ರೋಳಿ ಗಣೇಶ್ ಮಕ್ಕಳಿಗಾಗಿ ಜಾದು ಪ್ರದರ್ಶನವನ್ನು ನಡೆಸಿಕೊಟ್ಟರು. ಬಾಲಗೋಕುಲ ಕಾರ್ಯಕ್ರಮವನ್ನು ಶ್ರೀರಾಮ ವಿದ್ಯಾ ಕೇಂದ್ರದ ಹಿರಿಯ ವಿದ್ಯಾರ್ಥಿಗಳಾದ ರಂಜನ್, ವಿಂಧ್ಯಾ ಹಾಗೂ ಶ್ರೀಮತಿ ಲತಾ ನಡೆಸಿಕೊಟ್ಟರು. ವಿದ್ಯಾ ಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತಮಾಧವ ಉಪಸ್ಥಿತರಿದ್ದರು. ಒಟ್ಟು 99 ಕುಟುಂಬದ 404 ಮಂದಿ ಭಾಗವಹಿಸಿದರು.






## ಸುಭಾಷಿತ ಮಂಜರಿ

ನ ದಾನತುಲ್ಯಂ ಧನಮನ್ಯದಸ್ತಿ
ನ ಸತ್ಯತುಲ್ಯಮ್ ವ್ರತಮನ್ಯದಸ್ತಿ ।
ನ ಶೀಲತುಲ್ಯಾಂ ಶುಭಮನ್ಯದಸ್ತಿ
ನ ಕ್ಷಾಂತಿತುಲ್ಯಂ ಹಿತಮನ್ಯದಸ್ತಿ ॥

**ದಾನಕ್ಕೆ ಸಮವಾದ ಸಂಪತ್ತು ಇನ್ನೊಂದಿಲ್ಲ. ಸತ್ಯಕ್ಕೆ ಸಮವಾದ ವ್ರತವಿಲ್ಲ. ಶೀಲಕ್ಕೆ ಸಮವಾದ ಶುಭವಿಲ್ಲ. ತಾಳ್ಮೆಗೆ ಸಮವಾದ ಶ್ರೇಯಸ್ಸು ಇನ್ನೊಂದಿಲ್ಲ.**


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಉಮಾವತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ಕಾಡುಗಳು: ನಮ್ಮ ಜೀವನಾಡಿ : 4.02.2026**



ಏಳನೇ ತರಗತಿಯ ವಿಜ್ಞಾನ ವಿಷಯದಲ್ಲಿ ಕಾಡುಗಳು: ನಮ್ಮ ಜೀವನಾಡಿ ಎಂಬ ಪಾಠಕ್ಕೆ ಪೂರಕವಾಗಿ ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರೊಂದಿಗೆ ಹಾಗೂ ಅಧ್ಯಾಪಕರೊಂದಿಗೆ ಕಾಡಿನ ವೀಕ್ಷಣೆಯಲ್ಲಿ ಭಾಗಿಯಾಗಿ ಪರಿಸರವನ್ನು ಅರಿತು–ಬೆರೆತು ಅವಧಿಯನ್ನು ಆನಂದಿಸಿದರು.

**ಕೊಡುಗೆ ಪ್ರದಾನ : 11.02.2026**

6ನೇ ತರಗತಿಯ ಗೌರಿಗಣೇಶ್ ಶಾಲೆಗೆ ಗಡಿಯಾರವನ್ನು ಕೊಡುಗೆಯಾಗಿ ನೀಡಿದನು.

ಪೋಷಕರ ಸಹಕಾರ : 13.02.2026



1, 2ನೇ ತರಗತಿಯವರ ವಾರ್ಷಿಕೋತ್ಸವದ ಪ್ರಯುಕ್ತ ಪೋಷಕರು, ಸ್ವಚ್ಛತಾ ಸಿಬ್ಬಂದಿ, ಪದವಿ ವಿದ್ಯಾರ್ಥಿಗಳು ಹಾಗೂ ವಿದ್ಯಾ–ಕೇಂದ್ರದ ಚಾಲಕರು ರಾತ್ರಿಯ ಸಹಭೋಜನದ ತಯಾರಿಯಲ್ಲಿ ಸಹಕರಿಸಿದರು.

**ಕವನ ಸ್ಪರ್ಧೆಯಲ್ಲಿ ತೃತೀಯ : 14.02.2026**

ಗಣಕರಂಗ(ರಿ), ಧಾರವಾಡ 77ನೇಯ ಗಣರಾಜ್ಯೋತ್ಸವ ಅಥವಾ ಸಂವಿಧಾನ ಉದಯೋತ್ಸವ ಆಚರಣೆ ಪ್ರಯುಕ "ಭಾರತ ಗಣರಾಜ್ಯ" ಶೀರ್ಷಿಕೆಯ ಕವನ ಸ್ಪರ್ಧೆಯಲ್ಲಿ ಶ್ರೀಮತಿ ರಾಜೇಶ್ವರಿ ಮಾತಾಜಿ ಇವರ "ನವಭಾರತ ನಿರ್ಮಾಣ" ಸ್ವರಚಿತ ಕವನವು "ತೃತೀಯ ಬಹುಮಾನ" ಪಡೆದುಕೊಂಡಿದೆ.

**ಭಜನೆ – ಸಾಮೂಹಿಕ ಹುಟ್ಟುಹಬ್ಬ: 26.2.26**



ಕಾರ್ಯಕ್ರಮದಲ್ಲಿ ಭ್ರಾಮರಿ ಮಹಿಳಾ ಭಜನಾ ಮಂಡಳಿ ಸದಸ್ಯರು ಹಾಗೂ 2ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನೆ ನಡೆಯಿತು. ಶ್ರೀಮತಿ ಆಶಾ ಮಾತಾಜಿ ದಿನದ ಮಹತ್ವ ತಿಳಿಸಿದರು. ಮಾತೃಭಾರತಿ ಸದಸ್ಯರಾದ ಶ್ರೀಮತಿ ಭಾಗ್ಯಲಕ್ಷ್ಮೀ ಹಾಡಿನ ಮೂಲಕ ಶುಭಹಾರೈಸಿದರು. ಮಾತೃಭಾರತಿ ಸದಸ್ಯರಾದ ಶ್ರೀಮತಿ ಧನ್ಯ ಹಾಗೂ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ವಿಜ್ಞಾನ ಸ್ಪರ್ಧೆಗಳು : 19 ರಿಂದ 25**

ವಿಜ್ಞಾನ ದಿನಾಚರಣೆಯ ಪ್ರಯುಕ್ತ ವಿಜ್ಞಾನ ಮಾದರಿ ಪ್ರದರ್ಶನ, ಗಣಿತ ಮಾದರಿ ಪ್ರದರ್ಶನ, ರಸಪ್ರಶ್ನೆ, ಔಷಧೀಯ ಸಸ್ಯಗಳ ಪರಿಚಯ, ವಿಜ್ಞಾನ ರಂಗೋಲಿ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

**ರಾಷ್ಟ್ರೀಯ ವಿಜ್ಞಾನ ದಿನಾಚರಣೆ : 28.02.26**



ನೀರಿನ ಕಾರಂಜಿ ಚಿಮ್ಮಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪುತ್ತೂರು ವಿವೇಕಾನಂದ ಸೆಂಟ್ರಲ್ ಸ್ಕೂಲ್‌ನ ಅಧ್ಯಕ್ಷರಾದ ಶ್ರೀಮತಿ ವಸಂತಿ.ಕೆ, ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜಿನ ಪ್ರೊಫೆಸರ್ ಡಾ। ಸವಿತಾ ಎಂ.ಬಿ ಹಾಗೂ ಸಾವಯವ ಕೃಷಿಕರು, ಸಂಪೂರ್ಣ ಸಹಜ ಕೃಷಿ ಯೂಟ್ಯೂಬ್ ಚಾನೆಲ್ ಮುಖ್ಯಸ್ಥರಾದ ಶ್ರೀ ಶಿವಪ್ರಸಾದ ಮಲೆಬೆಟ್ಟು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ನಂತರ ಗಣ್ಯರಿಗೆ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು. ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ–ಗಣಿತ ಮಾದರಿ ಹಾಗೂ ಔಷಧೀಯ ಸಸ್ಯಗಳ ಪ್ರದರ್ಶನ ವೀಕ್ಷಿಸಿದ ಅತಿಥಿಗಳು ವಿದ್ಯಾರ್ಥಿಗಳಿಂದ ವಿವರಣೆಗಳನ್ನು ಪಡೆದು–ಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ವೇದಿಕೆಯಲ್ಲಿ ವೃತ್ತಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ರಾಗಿರುವ ಶ್ರೀ ಕೃಷ್ಣಮೂರ್ತಿ, ಸಂಘದ ನಿವೃತ್ತ ಪ್ರಚಾರಕರು ಹಾಗೂ ಕರಾಟೆ ಶಿಕ್ಷಕರಾದ ಶ್ರೀ ಭುವನೇಶ್ವರ, ಸಂಸ್ಥೆಯ ಹಿರಿಯು ಉಪಸ್ಥಿತರಿದ್ದರು.

**ಚಾಲಕರ ಬೈಠಕ್ : 02.02.2026**



ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಅವರ ಉಪಸ್ಥಿತಿಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಚಾಲಕರ ಬೈಠಕ್ ನಡೆಯಿತು. ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ 07–02–2026**




ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಮಂಗಳೂರು (ಭಾರತೀಯ ಸೇನೆಯ ಹೆಲಿಕಾಪ್ಟರ್ ಟೆಕ್ನಿಷಿಯನ್ ಆಗಿ ಕರ್ತವ್ಯ ನಿರ್ವಹಿಸಿದವರು) ಇವರು ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀಮತಿ ಶಾಂತಿ ಹಾಗೂ ವಿದ್ಯಾಕೇಂದ್ರದ ಸಹಸಂಚಾಲಕರು ಶ್ರೀ ರಮೇಶ್ ಎನ್, ಮುಖ್ಯ ಗುರುಗಳಾದ ಶ್ರೀ ಗೋಪಾಲ್ ಶ್ರೀಮನ್ ಉಪಸ್ಥಿತರಿದ್ದರು.

**ಹತ್ತನೇ ತರಗತಿಯ ಪೋಷಕರ ಸಭೆ 10.2.26**



ಪೋಷಕರ ಸಭೆಯಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ ಪೋಷಕರ ಅಭಿಪ್ರಾಯದ ನಂತರ ಮಾರ್ಗದರ್ಶನ ಮಾಡಿದರು. ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಶ್ರೀಮತಿ ಲಕ್ಷ್ಮಿ ರಘುರಾಜ್, ಶ್ರೀಮತಿ ಸುಧಾ ಸೂರ್ಯನಾರಾಯಣ್ ಭಟ್ ಕಶೆಕೋಡಿ, ಶ್ರೀ ಗೋಪಾಲ ಎಂ ಉಪಸ್ಥಿತರಿದ್ದರು.

**ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಟಿ.ಟಿ ಇಂಜೆಕ್ಷನ್ 16.2.2026ರಂದು ನೀಡಲಾಯಿತು.**

**ಬರೋಡ ಬ್ಯಾಂಕ್ ಸೇವೆಗಳ ಬಗ್ಗೆ ಮಾಹಿತಿ 18.2.26**



ಬರೋಡ ಬ್ಯಾಂಕ್ ನ ಸೇವೆಗಳ ಬಗ್ಗೆ ಎಲ್ಲಾ ಶಿಕ್ಷಕರಿಗೆ ಮಾಹಿತಿಯನ್ನು ನೀಡಲಾಯಿತು.

**ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರ 27.02.2026 ರಿಂದ 28.02.2026**



ವಿವೇಕಾನಂದ ಪೊಲಿಟೆಕ್ನಿಕ್ ಕಾಲೇಜು ನೆಹರು ನಗರ ಪುತ್ತೂರು ಇಲ್ಲಿ ನಡೆದ ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷರಾದ ಶ್ರೀ ಪುರುಷೋತಮ ಶ್ರೀಮನ್ ಹಾಗೂ ರಮ್ಯಾ ಮಾತಾಜಿ ಭಾಗೆವಹಿಸಿದರು.

**ಸಾಂಸ್ಕೃತಿಕ ಸ್ಪರ್ಧೆ 13.2.26 – 20.2.26**

ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಪ್ರಬಂಧ, ಭಾಷಣ, ವರದಿ ತಯಾರು ಮುಂತಾದ ಶೈಕ್ಷಣಿಕ ಸ್ಪರ್ಧೆಗಳು ಹಾಗೂ ನೃತ್ಯ, ರಚೆ–ಗ್ರೋ ಹಾಡು, ಛದ್ಮವೇಷ ಮುಂತಾದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು.

**ವಾಣಿಜ್ಯ ವಿಭಾಗದ ವತಿಯಿಂದ "ಪ್ರಾಜೆಕ್ಟ್ ಬರವಣಿಗೆಯ ಅವಶ್ಯಕತೆಗಳು" ಕಾರ್ಯಕ್ರಮ 26.02.2026**




ವಾಣಿಜ್ಯ ವಿಭಾಗವು ಐಕ್ಯೂಎಸಿ (IQAC) ಸಹಯೋಗದಲ್ಲಿ ಬಿ.ಕಾಂ., ಬಿ.ಎ., ಮತ್ತು ಬಿ.ಸಿ.ಎ. ವಿದ್ಯಾರ್ಥಿಗಳಿಗಾಗಿ "ಪ್ರಾಜೆಕ್ಟ್ ಬರವಣಿಗೆಯ ಅವಶ್ಯಕತೆಗಳು" ಎಂಬ ವಿಷಯದ ಮೇಲೆ ಒಂದು ಅಭಿಮುಖೀಕರಣ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮದ ಉದ್ದೇಶವು ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಪ್ರಾಜೆಕ್ಟ್ ತಯಾರಿ ಹಾಗೂ ಶೈಕ್ಷಣಿಕ ಬರವಣಿಗೆ ಕೌಶಲ್ಯಗಳ ಕುರಿತು ಮಾರ್ಗದರ್ಶನ ನೀಡುವುದಾಗಿತ್ತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿಯ ವಾಣಿಜ್ಯ ವಿಭಾಗದ ಅಧ್ಯಾಪಕಿ ಶ್ರೀಮತಿ ವೈಶಾಲಿ ಕೆ ಅವರು ಹಾಗೂ ಮಂಗಳೂರು ನಗರದ ಗಾಂಧಿನಗರದಲ್ಲಿರುವ ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನ ವಾಣಿಜ್ಯ ವಿಭಾಗದ ಸಹ ಪ್ರಾಧ್ಯಾಪಕ ಹಾಗೂ ವಿಭಾಗಾಧ್ಯಕ್ಷರಾದ ಡಾ. ಯತೀನ್ ಅವರು ಭಾಗವಹಿಸಿದರು. ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀ ಯತಿರಾಜ್, ಕಾರ್ಯಕ್ರಮದ ಸಂಯೋಜಕಿಯಾದ ದೀಕ್ಷಿತಾ ಅವರು ಹಾಗೂ ಸಹ–ಸಂಯೋಜಕಿಯಾದ ನವಿತಾ ಅವರು ಉಪಸ್ಥಿತರಿದ್ದರು.

**"ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಮೆಗಾ ಕ್ವಿಜ್ ಸ್ಪರ್ಧೆ"**

ಬಿ.ಸಿ.ಎ. ವಿಭಾಗವು ಐಕ್ಯುಎಸಿ (IQAC) ಸಹಯೋಗದಲ್ಲಿ 27ನೇ ಫೆಬ್ರವರಿ 2026 ರಂದು ಕಂಪ್ಯೂಟರ್ ಲ್ಯಾಬ್ನಲ್ಲಿ ಮೆಗಾ ಕ್ವಿಜ್ ಸ್ಪರ್ಧೆಯನ್ನು ಆಯೋಜಿಸಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಜಾಗೃತಿ, ತಾರ್ಕಿಕ ಚಿಂತನೆ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಆಸಕ್ತಿ ಹೆಚ್ಚಿಸುವ ಉದ್ದೇಶವನ್ನು ಹೊಂದಿತ್ತು. ಕ್ವಿಜ್ ಸ್ಪರ್ಧೆಯಲ್ಲಿ ರಾಪಿಡ್‌ಫೈರ್ ರೌಂಡ್, ವಿಜ್ಞಾನಿ ಗುರುತಿಸುವಿಕೆ ಮತ್ತು ಪ್ರಸ್ತುತ ವಿಜ್ಞಾನ ಹಾಗೂ ತಂತ್ರಜ್ಞಾನ ಸುದ್ದಿಗಳಂತಹ ಹಲವಾರು ಹಂತಗಳು ಒಳಗೊಂಡಿದ್ದವು. 32 ಮಂದಿ ಸ್ಪರ್ಧಿಗಳು ಕ್ವಿಜ್ನಲ್ಲಿ ಪಾಲ್ಗೊಂಡಿದ್ದರು. ಹಲವು ಸವಾಲಿನ ಹಂತಗಳ ನಂತರ ವಿಜೇತರನ್ನು ಘೋಷಿಸಲಾಯಿತು.

**ಭವಿಷ್ ಘಟಕ – ಉಪನ್ಯಾಸ ಕಾರ್ಯಕ್ರಮ**

ಭವಿಷ್ ಘಟಕದ ವತಿಯಿಂದ IQAC ಸಹಯೋಗದಲ್ಲಿ 27.02.2026 ರಂದು " Learn Values- Lead the nation" ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪದವಿ ವಿಭಾಗದ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನ ಕುಮಾರಿ ಇವರು ಉಪ ಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ ಮಾತಾಜಿ, ಭವಿಷ್ ಘಟಕದ ಸಹ ನಿರ್ದೇಶಕರಾದ ಶ್ರೀಮತಿ ಆಶಾಲತಾ ಮಾತಾಜಿ ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಮಾನಸ (I BA) ನಿರೂಪಿಸಿ, ಸುತಿ (I BA) ಸ್ವಾಗತಿಸಿ, ಅಕ್ಷಯ್ ನರಸಿಂಹ ( II BA) ವಂದಿಸಿದರು.

**ಕಾರ್ಯಾಗಾರದಲ್ಲಿ ಭಾಗಿ 21.02.2026**

ಮಂಗಳೂರು ವಿಶ್ವವಿದ್ಯಾಲಯ ವಾಣಿಜ್ಯ ಶಿಕ್ಷಕರ ಸಂಘವು ಹಂಪನಕಟ್ಟೆಯ ಮಿಲಾಗ್ರೆಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಖಗಿ ಸೆಮಿಸ್ಟರ್ ಬಿ.ಕಾಂ. ಪಠ್ಯಕ್ರಮಗಳ ಕುರಿತು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ವಾಣಿಜ್ಯ ವಿಭಾಗದ ಉಪನ್ಯಾಸಕರು ಭಾಗವಹಿಸಿದರು.

**ರಾಷ್ಟ್ರೀಯ ವಿಜ್ಞಾನ ದಿನದ ಆಚರಣೆ;**

ರಾಷ್ಟ್ರೀಯ ವಿಜ್ಞಾನ ದಿನವನ್ನು 28 ಫೆಬ್ರವರಿ 2026 ರಂದು ಪ್ರೇರಣಾ ಸಭಾಭವನ ಬಿಸಿಎ ವಿಭಾಗದ ವತಿಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು II ಬಿಸಿಎ ವಿದ್ಯಾರ್ಥಿ ಜಯಸೂರ್ಯ ಅವರು ನಿರೂಪಿಸಿದರು. ಗೌರವ ಅತಿಥಿಯಾಗಿ ಪ್ರಾಂಶುಪಾಲರು ಹಾಗೂ ಆಡಳಿತಾಧಿಕಾರಿಯಾದ ಶ್ರೀ ಕೃಷ್ಣಪ್ರಸಾದ್ ಕೆ. ಎನ್. ಅವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ರೋಹಿಣಿ, ವಿದ್ಯಾ–ಕೇಂದ್ರದ ಅಟಲ್ ಟಿಂಕರಿಂಗ್ ಲ್ಯಾಬ್ ಸಂಯೋಜಕಿ ಹಾಗೂ ಬಿಸಿಎ ವಿಭಾಗದ ಮುಖ್ಯಸ್ಥರಾದ ಶ್ರೀ ಧನಂಜಯ ಕೆ. ಅವರು ಭಾಗವಹಿಸಿದ್ದರು.

ರಾಷ್ಟ್ರೀಯ ವಿಜ್ಞಾನ ದಿನದ ಕ್ವಿಜ್ ಸ್ಪರ್ಧೆಯ ಬಹುಮಾನಗಳನ್ನು ಶ್ರೀಮತಿ ರೋಹಿಣಿ ಅವರು ವಿತರಿಸಿದರು. II ಬಿಸಿಎ ವಿದ್ಯಾರ್ಥಿ ಯಕ್ಷಿತ್ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಸಮಾಪಿಸಿದರು.

## ರಾಷ್ಟ್ರೀಯ ಸೇವಾ ಯೋಜನೆ 2025–2026ರ ವಾರ್ಷಿಕ ವಿಶೇಷ ಶಿಬಿರ 29.01.26





ಶ್ರೀರಾಮ ಪ್ರಥಮದರ್ಜೆ ಕಾಲೇಜಿನ 2025–2026ನೇ ವರ್ಷದ ಎನ್.ಎಸ್.ಎಸ್ ವಾರ್ಷಿಕ ವಿಶೇಷ ಶಿಬಿರವು ಬಂಟ್ವಾಳ ತಾಲೂಕು ಬೊಳ್ಳಾಯಿ ನಗ್ರಿ ಇಲ್ಲಿನ ಶಾರದಾ ಭಜನಾಮಂದಿರದಲ್ಲಿ ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕರಾದ ಶ್ರೀ ವಸಂತ ಮಾಧವ ದೀಪ ಪ್ರಜ್ವಲಿಸಿ ಶಿಬಿರಕ್ಕೆ ಚಾಲನೆ ನೀಡಿಸರು. ಸಜಿಪನಡು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಾಯಕುಮಾರಿ, ಪಂಚಾಯತ್ ಅಧ್ಯಕ್ಷೆ ಶೋಭಾ ಶೆಟ್ಟಿ, ಶಾರದಾ ಭಜನಾಮಂದಿರದ ಅಧ್ಯಕ್ಷ ಕೃಷ್ಣಪ್ಪ ಕುಲಾಲ್ ಕೊಳಂಬೆ ಜೆನಿಫರ್ CHO ಪ್ರಾಥಮಿಕ ಆರೋಗ್ಯ ಕೇಂದ್ರ, ಸತೀಶ್ ಬೋಳ್ಯಯಿ ಅದ್ಯಕ್ಷರು ಶಿಕ್ಷಕ ರಕ್ಷಕ ಸಂಘ, ಶಿಬಿರ ಸಂಯೋಜಕಿ ಶ್ರೀಮತಿ ವಿನುತಾಲಕ್ಷ್ಮೀ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಪ್ರಾಂಶುಪಾಲ ಶ್ರೀ ಯತಿರಾಜ್ ಪೆರಾಜೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರೋಪದಲ್ಲಿ ಕ್ಯಾಂಪ್ಕೋ ಪ್ರೈ. ಲಿಮಿಟೆಡ್ ಇದರ ಪುತ್ತೂರು ವಿಭಾಗದ ಅಧ್ಯಕ್ಷ ಎಸ್ಆರ್ ಶ್ರೀ ಸತೀಶ್‌ಚಂದ್ರ, ಅಧ್ಯಕ್ಷತೆ ವಹಿಸಿದ್ದರು. ಶಿಬಿರಕ್ಕೆ ಲಯನ್ ರಮೇಶ್, ಸಜಿಪದ ಉದ್ಯಮಿ ಶ್ರೀಕಾಂತ್ ಶೆಟ್ಟಿ, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯೆ ಶ್ರೀಮತಿ ಲಕ್ಷ್ಮೀ ರಘುರಾಜ್, ಇವರು ಭೇಟಿ ನೀಡಿ ಶುಭ ಹಾರೈಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಶ್ರೀಮತಿ ವಿನುತಾ ಲಕ್ಷ್ಮೀ, ಸಹ ಸಂಯೋಜನಾಧಿಕಾರಿ ದೀಕ್ಷಿತ್, ಸಂಸ್ಕೃತ ಉಪನ್ಯಾಸಕಿ ಪ್ರಸನ್ನಾ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಬಿರವು ಒಂದು ವಾರಗಳ ಕಾಲ ಪೂರ್ತಿ ಸನಿವಾಸ ನಡೆಯಿತು

**ಕೆಡ್ಡಸ ಆಚರಣೆ : 12.02.2026 :** ತುಳಸಿಕಟ್ಟೆಯ ಮುಂದೆ ಗೋಮಯದಿಂದ ಶುದ್ಧೀಕರಿಸಿ, ಭೂಮಿ ದೇವಿಯ ಸಾನಿಧ್ಯ ರಚಿಸಿ, ದೀಪಹಚ್ಚಿ, ತುದಿಎಲೆಯ ಮೇಲೆ ಎಣ್ಣೆ, ಸೀಗೆಕಾಯಿ, ಅರಶಿನ – ಕುಂಕುಮ, ಪಚ್ಚೆ ಹಸಿರಿನ ಹುಡಿ, ವೀಳ್ಯದೆಲೆ ಇತ್ಯಾದಿಗಳನ್ನು ಭೂಮಿ ದೇವಿಯ ಸ್ನಾನಕೋಸ್ಕರ ಇಟ್ಟು ಹುರುಳಿ, ಹೆಸರುಕಾಳು, ಒಣಕೊಬ್ಬರಿ, ಕಡಲೆಕಾಯಿಗಳ ಮಿಶ್ರಣ(ನನ್ನೇರಿ) ಇದರೊಂದಿಗೆ ತುಳುನಾಡಿನ ವಿವಿಧ ಭಕ್ಷ್ಯಗಳನ್ನು ಊರಿನ ಹಿರಿಯ ಮಾತೃಶ್ರೀಯವರಾದ ಜಯಂತಿ ಭೂಮಿಗೆ ಎಣ್ಣೆ ಹಾಲು ಹಾಕಿ ಬಡಿಸಿದರು. ವಿದ್ಯಾರ್ಥಿಗಳು ಸುತ್ತ ನಿಂತು ಈ ಕಾರ್ಯಕ್ರಮ ವೀಕ್ಷಿಸಿದರು. ಅಧ್ಯಾಪಕರಾದ ಶ್ರೀಮತಿ ದೇವಿಕಾ.ಪಿ.ಶೆಟ್ಟಿ ಕೆಡ್ಡಸದ ಮಹತ್ವವನ್ನು ತಿಳಿಸಿದರು. ನಂತರ ಕಾರ್ಯಕ್ರಮದಲ್ಲಿ ಭೂಮಿಕಾ, ವೈದೇಹಿ, ಸಾನ್ವಿ ಹಾಗೂ ಗೌರಿನಂದಿನಿ ಕೆಡ್ಡಸ ಕುರಿತಾದ ಹಾಡನ್ನು ಹಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ನನ್ನೇರಿಯನ್ನು ಹಂಚಲಾಯಿತು.



ಡಾ॥ ಕಮಲಾ ಪ್ರಭಾಕರ ಭಟ್, ಶ್ರೀಮತಿ ಲಕ್ಷ್ಮೀ ರಘುರಾಜ್ ಮತ್ತು ಶ್ರೀಮತಿ ಮಲ್ಲಿಕಾ ಆರ್ ಶೆಟ್ಟಿ, ಹಿರಿಯ ಸ್ವಚ್ಛತಾ ಸಹಾಯಕಿ ಶ್ರೀಮತಿ ಸುಮತಿ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.









ಸಂಧ್ಯಾಭಜನ್ : 15.02.2026 : ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳ ತಮ್ಮ ತಮ್ಮ ಮನೆಗಳಲ್ಲಿ ಸಂಜೆ "ಭಜನ್ ಸಂಧ್ಯಾ" ಕಾರ್ಯಕ್ರಮ ನಡೆಸಿದರು. ಅದರ ಭಾವಚಿತ್ರವನ್ನು ಅಧ್ಯಾಪಕರಿಗೆ ಕಳುಹಿಸಿಕೊಟ್ಟರು. ಒಟ್ಟು 528 ಮಾತೆಯರು, 478 ಪುರುಷರು, 1397 ಮಕ್ಕಳು ಹಾಗೂ ಬೇರೆ ಮನೆಯಿಂದ 130 ಜನ ಭಾಗವಹಿಸಿದರು.

**ಜೆ.ಇ.ಇ ಮೈನ್ಸ್ 2026 ವಾಸವಿ ಕೆ.ಸಿ ಅತ್ಯುತ್ತಮ ಸಾಧನೆ.**




ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸುವ ರಾಷ್ಟ್ರ ಮಟ್ಟದ ಜೆ.ಇ.ಇ ಮೈನ್ಸ್ 2026ರ ಪ್ರಥಮ ಹಂತದ ಪರೀಕ್ಷೆಯಲ್ಲಿ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ವಾಸವಿ ಕೆ.ಸಿ 97.68 ಪರ್ಸಂಟೈಲ್ ಅಂಕಗಳನ್ನು ಪಡೆದು ಸಾಧನೆಗೈದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | | |
|---|---|---|
| ಚಿನ್ನಾಭರಣ ಸಾಲ | – | 11% |
| ಜಾಮೀನು ಸಾಲ | – | 16.5% |
| ಅಡವು ಸಾಲ | – | 13.5% |
| ವಾಹನ ಸಾಲ | – | 12% |
| ಗೃಹ ನಿರ್ಮಾಣ ಸಾಲ | – | 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7% |
| 92ರಿಂದ 181 ದಿನಗಳು | – 7.5% |
| 182 ರಿಂದ 364 ದಿನಗಳು | – 8.5% |
| 1 ವರ್ಷ ಮತ್ತು ಮೇಲ್ಪಟ್ಟು | – 9.5% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

Vol. : 12 Issue : 10 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363